**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಸಚ್ಚಾರಿತ್ರ್ಯ ಹೊಂದಿರುವ ಹೆಸರಾಂತ ಪ್ರೊಫೆಸರ್ ಓರ್ವರಲ್ಲಿ ಮನೆಪಾಠ ಹೇಳಿಸಿಕೊಳ್ಳಲು ಅನೇಕ ವಿದ್ಯಾರ್ಥಿಗಳೂ, ವಿದ್ಯಾರ್ಥಿಗಳ ಹೆತ್ತವರೂ ಬಹಳಷ್ಟು ಪ್ರಯತ್ನಿಸಿದರೂ ಆತ ಅದನ್ನು ಒಪ್ಪಿಕೊಳ್ಳದೆ ತಿರಸ್ಕರಿಸುತ್ತಾನೆ.

ಅದೇ ಊರಿನಲ್ಲಿ ದೊಡ್ಡ ರೌಡಿಯೊಬ್ಬ ದಾರಿ ತಪ್ಪುತ್ತಿದ್ದ ತನ್ನ ಮಗನನ್ನು ಸರಿಪಡಿಸಬೇಕೆಂದು ಈ ಪ್ರೊಫೆಸರರಲ್ಲಿ ವಿನಂತಿಸಲು ನಿರ್ಧರಿಸಿ ಅವರ ಮನೆಗೆ ಬಂದ. ಬಹಳ ಹೊತ್ತಿನ ನಂತರ ಪ್ರೊಫೆಸರ್ ಮನೆಯಿಂದ ಹೊರಬಂದ ಆ ರೌಡಿಯನ್ನು 'ಏನಾಯಿತು' ಎಂದು ಸ್ನೇಹಿತರು ಪ್ರಶ್ನಿಸಿದರು.

ನಾನು ಅನೇಕ ಜನರನ್ನು ಹೆದರಿಸಿ, ಬೆದರಿಸಿ ನನ್ನ ಕೆಲಸವನ್ನು ಮಾಡಿಸಿಕೊಂಡಿದ್ದೇನೆ. ಒಳಗಿರುವ ಈ ಮನುಷ್ಯ(ಪ್ರೊಫೆಸರ್) ಹೆದರಿಕೆ ಭಯ ಎಂದರೆ ಏನೆಂದು ತಿಳಿಯದ ವ್ಯಕ್ತಿ. ಅಂತಹವನನ್ನು ನಾನೇನು ಮಾಡಲು ಸಾಧ್ಯ ಎಂದು ನಕ್ಕು ಮುಂದೆ ಸಾಗಿದನು.

ಈ ಕಥೆಯಲ್ಲಿ ಬರುವ ಪ್ರೊಫೆಸರ್ ಭಯವನ್ನು ಗೆದ್ದವನು ಆತನಿಗೆ ಯಾವುದರ ಭಯವೂ ಇಲ್ಲ. ಸಚ್ಚಾರಿತ್ರ್ಯ ಹಾಗೂ ಆದರ್ಶಗಳನ್ನೇ ನಂಬಿಕೊಂಡು ಯಾವುದನ್ನಾದರೂ ಎದುರಿಸಬಹುದು ಎಂಬ ಮನೋಬಲವುಳ್ಳವನು ಆದ್ದರಿಂದಲೇ ಯಾರಿಗೂ ಯಾವ ಬೆದರಿಕೆಗೂ ಬಗ್ಗದೆ, ಜಗ್ಗದೆ ಮುನ್ನಡೆ ಕಂಡು ಯಶಸ್ವಿ ಪುರುಷನೆನೆಸಿಕೊಂಡನು.

ಆದರೆ ಭಯವೇ ಇರಕೂಡದು ಎಂದು ಇದರ ಅರ್ಥವಲ್ಲ. ಉಪ್ಪು ಇದ್ದರೆ ಮಾತ್ರ ತಿನ್ನುವ ಆಹಾರ ರುಚಿಯೆನಿಸುವುದು. ಉಪ್ಪು ಹಾಕದೆ ಇರುವ ಆಹಾರ ಬಾಯಿಗೆ ರುಚಿಯಾಗುವುದಿಲ್ಲ. ದೇಹಕ್ಕೆ ಬೇಕಾದ ಲವಣಾಂಶ ಸಿಗದೆ ಆರೋಗ್ಯವೂ ಹಾಳು. ಆದ್ದರಿಂದ ತಿನ್ನುವ ಆಹಾರಕ್ಕೆ ಉಪ್ಪು ಬೇಕಾದಂತೆ ಭಯವೂ ನವಿರಾಗಿ ಮನುಷ್ಯನಲ್ಲಿ ಇರಬೇಕು. ಯಾವುದೇ ಭಯವೂ ಇರದ ವ್ಯಕ್ತಿ ಉಪ್ಪು ತಿನ್ನದ ವ್ಯಕ್ತಿಯಂತೆ ಒಂದಲ್ಲ ಒಂದು ದಿನ ತನ್ನನ್ನು ತಾನು ನಾಶಮಾಡಿಕೊಳ್ಳುವುದರಲ್ಲಿ ಸಂಶಯವಿಲ್ಲ.

ಹಾಗೆಂದು ಅತೀ ಭಯವೂ ಇರಕೂಡದು. ಅದೂ ಅತೀಉಪ್ಪನ್ನು ತಿಂದಂತೆ ಆಹಾರದ ರುಚಿಯನ್ನೂ ಕೆಡಿಸುತ್ತದೆ. ಅಲ್ಲದೆ ದೇಹದ ಆರೋಗ್ಯದಲ್ಲಿಯೂ ಏರುಪೇರು ಕಾಣಿಸುತ್ತದೆ. ಅತೀ ಭಯವುಳ್ಳ ವ್ಯಕ್ತಿಯು ಜೀವನದಲ್ಲಿ ಏನನ್ನೂ ಸಾಧಿಸಲಾರ. ಪ್ರತಿಯೊಂದು ಮುನ್ನಡೆಗೂ ಆತನಲ್ಲಿರುವ ಭಯ ಆತನ ಅಭಿವೃದ್ಧಿಯಲ್ಲಿ ಹಿನ್ನಡೆಯನ್ನು ಕಾಣಿಸುತ್ತದೆ. ಯಾವುದೇ ಮುನ್ನಡೆ ಪಡೆಯಲು ಜೀವನದಲ್ಲಿ ಅಪಾಯ(Risk)ವನ್ನೂ ಎದುರಿಸಲೇಬೇಕು. ಅದನ್ನು ಜಯಿಸಿದಾಗಲೇ ಆತನ ಅಭಿವೃದ್ಧಿ ಗೋಚರಕ್ಕೆ ಬರುವುದು.

ಆದ್ದರಿಂದ ಜೀವನದಲ್ಲಿ ಭಯ ಹೆದರಿಕೆಗಳು ಎಲ್ಲರಿಗೂ ಇರಲಿ. ಅದು ಅತಿಯಾಗದೆ ಮಿತಿಯಲ್ಲಿರಲಿ. ಎಲ್ಲಕ್ಕಿಂತಲೂ ಗುರುಹಿರಿಯರಲ್ಲಿ ಹಾಗೂ ದೇವರಲ್ಲಿ ಭಕ್ತಿ ತುಂಬಿದ ಭಯವು ಅತಿ ಮುಖ್ಯ.

# ಕ್ರೌಂಚವಧೆ (ಪೌರಾಣಿಕ ಕಥೆ)

**ವೈ. ಶಂಕರನಾರಾಯಣರಾವ್, ಪಡುಬಿದಿರೆ**

**(ಹಿಂದಿನ ಸಂಚಿಕೆಯಲ್ಲಿ ಪ್ರಕಟಗೊಂಡಿದ್ದು ದೋಷಪೂರ್ಣವಾದುದರಿಂದ ಪುನ: ಪ್ರಕಟಿಸುತ್ತಿದ್ದೇವೆ)**

ಜುಳುಜುಳು ನಿನಾದದಿಂದ ಶುಭ್ರ ಸಲಿಲ ರಾಶಿಯನ್ನು ಮುಂತಳ್ಳುತ್ತಾ ತಮಸಾ ನದಿಯು ಪ್ರವಹಿಸುತ್ತಿದೆ. ನದೀತೀರದ ಎಲ್ಲೆಡೆಗಳಲ್ಲಿಯೂ ಜೀವರಾಶಿಗಳಿಗೆ ಚೈತನ್ಯವೀಯುವ ದಟ್ಟವಾದ ನಿತ್ಯ ಹರಿದ್ವರ್ಣದ ಅರಣ್ಯಗಳಿವೆ. ಆ ಹೊತ್ತು ದಿನಕರನು ತನ್ನ ಹೊಂಗಿರಣಗಳ ನಿಡಿದಾದ ತೋಳುಗಳಿಂದ ಉಷೆಯನ್ನು ಆಲಂಗಿಸಿಕೊಳ್ಳಲು ಸನ್ನಾಹ ನಡೆಸುತ್ತಿದ್ದಾನೆ. ಸನಿಹದಲ್ಲಿರುವ ವಾಲ್ಮೀಕಿ ಋಷಿಗಳ ಆಶ್ರಮದಿಂದ ಸುಗಂಧ ಭೂಯಿಷ್ಠವಾದ ಹೋಮ ಧೂಮವು ಆಗಸಕ್ಕೇರುತ್ತಿದೆ. ಮಹರ್ಷಿಗಳು ಆಗ ತಾನೇ ಅಗ್ನಿಗೆ ಆಜ್ಯವನ್ನು ಅರ್ಪಿಸಿ ತೇಜೋವಂತರಾಗಿದ್ದಾರೆ. ಶಿಷ್ಯ ಭಾರದ್ವಾಜರು ವಿನೀತರಾಗಿ ಕೈಗಳನ್ನು ಮುಗಿದು ಆಶ್ರಮದಲ್ಲಿ ಆ ದಿವಸ ನಡೆಸಬೇಕಾಗಿರುವ ಕಾರ್ಯ ಚಟುವಟಿಕೆಗಳನ್ನು ಗುರುಗಳಲ್ಲಿ ನಿವೇದಿಸಿಕೊಳ್ಳುತ್ತಿದ್ದಾರೆ. ಅಷ್ಟರಲ್ಲಿಯೇ ಆಶ್ರಮದ್ವಾರದಿಂದ ''ನಾರಾಯಣ, ನಾರಾಯಣ'' ಎಂಬ ಹರಿನಾಮ ಸ್ಮರಣೆ ಕಂಚಿನ ಕಂಠದಿಂದ ಕೇಳಿಬಂತು. ಮಹರ್ಷಿಗಳು ಕಣ್ಣರಳಿಸಿ ನೋಡುತ್ತಾರೆ; ಸಾಕ್ಷಾತ್ ಬ್ರಹ್ಮದೇವನ ಮಾನಸ ಪುತ್ರರಾದ ತ್ರಿಲೋಕ ಸಂಚಾರಿ ನಾರದರು! ವಾಲ್ಮೀಕಿ ಮುನಿಗಳು ಅವರನ್ನು ಆದರದಿಂದ ಸ್ವಾಗತಿಸಿ, ಉಚಿತಾಸನದಲ್ಲಿ ಕುಳ್ಳಿರಿಸಿ ಅರ್ಘ್ಯ-ಪಾದ್ಯ, ಮಧುಪರ್ಕಗಳಿಂದ ಸತ್ಕರಿಸಿದರು.

ಮಹರ್ಷಿಗಳು ಕೈ ಮುಗಿದು ''ಮುನಿಗಳೇ, ಈ ಲೋಕದಲ್ಲಿ ಧರ್ಮಿಷ್ಠನೂ, ಸತ್ಯಸಂಧನೂ, ಮಹಾಪರಾಕ್ರಮಿಯೂ, ಅಕಳಂಕನೂ ಮಹಾಜ್ಞಾನಿಯೂ, ಮರ್ಯಾದಾ ಪುರುಷೋತ್ತಮನೂ ಆದ ಮಹಾ ಪುರುಷನೊಬ್ಬನು ಇದ್ದರೆ ಅವನ ಚರಿತ್ರೆಯನ್ನು ಕೇಳಲು ನನ್ನ ಮನವು ಉತ್ಸುಕವಾಗಿದೆ. ತಾವು ಕೃಪೆಯಿಟ್ಟು ಅಂತಹ ಧರ್ಮಾತ್ಮನ ಕಥೆಯನ್ನು ಹೇಳಿ ಧನ್ಯನನ್ನಾಗಿಸಬೇಕು'' ಎಂದು ಭಿನ್ನವಿಸಿಕೊಂಡರು. ನಾರದರು ಪ್ರಸನ್ನಚಿತ್ತರಾಗಿ 'ಮಹರ್ಷಿಗಳೇ, ಸತ್ವಗುಣ ಸಂಪನ್ನರೂ, ಲೋಕಕಲ್ಯಾಣವನ್ನೇ ಬಯಸುವ ನಿಮ್ಮಂತಹ ಸುಜ್ಞಾನಿಗಳೂ ಮಹಾಪುರುಷನೊಬ್ಬನ ಕಥೆಯನ್ನು ಕೇಳಲು ಬಯಸುವುದು ಸಹಜವೇ ಆಗಿದೆ. ಇಂತಹ ವಿರಳಾತಿವಿರಳರಲ್ಲಿ ಇಕ್ಷ್ವಾಕು ವಂಶದ ಶ್ರೀರಾಮಚಂದ್ರನು ಒಬ್ಬನು. ಅವನ ಕಥೆಯನ್ನು ಹೇಳುವೆನು'' ಎಂದು ನುಡಿದು ಕಥೆಯನ್ನು ಕೆಲವೆಡೆ ಚುಟುಕಾಗಿಯೂ ಅಗತ್ಯವಿದ್ದಲ್ಲಿ ವಿಸ್ತರಿಸಿಯೂ ಹೇಳಿದರು. ನಾರದರು ಹೇಳಿದ ಅದ್ಭುತವಾದ ಕಥೆಯಿಂದ ಮಹರ್ಷಿಗಳು ಪ್ರಭಾವಿತರಾದರು. ಆ ಗಳಿಗೆಯಿಂದ ಅವರಿಗೆ ರಾಮನಾಮವೇ ತಾರಕ ಮಂತ್ರವಾಯಿತು.

ನಾರದ ಮುನಿಗಳನ್ನು ಬೀಳ್ಕೊಂಡ ಋಷಿಗಳು ಮಾಧ್ಯಾಹ್ನಿಕಕ್ಕೆಂದು ನದೀ ತೀರಕ್ಕೆ ಆಗಮಿಸಿದರು. ಎತ್ತ ನೋಡಿದರೂ ಅಲ್ಲಿ ತುಂಬಿದ ಪ್ರಕೃತಿ ಸೌಂದರ್ಯವೇ ಸೌಂದರ್ಯ! ಮಾರುತನ ರಭಸಕ್ಕೆ ಚಲಿಸುವ ಕೊಂಬೆರೆಂಬೆಗಳ ಎಡೆಯಿಂದ ತೂರಿ ಬರುವ ಸೂರ್ಯರಶ್ಮಿಗಳು ಭೂಮಿಯ ಮೇಲೆ ಬೆಳಕಿನ ಬಗೆಬಗೆಯ ವರ್ಣಚಿತ್ತಾರಗಳನ್ನು ರಚಿಸಿ ಚಿನ್ನಾಟವಾಡುತ್ತಿವೆ. ಗಿಡಗಳಲ್ಲಿ ವರ್ಣಮಯ ಕಾಡು ಕುಸುಮಗಳು ಅರಳಿ ಸುಗಂಧವನ್ನು ಬೀರುತ್ತಿವೆ. ವೃಕ್ಷಗಳಿಗೆ ಹಬ್ಬಿದ ಲತೆಗಳಿಂದ ಜೊಂಪೆ-ಜೊಂಪೆಯಾಗಿ ಪುಷ್ಪಗಳು ಅರಳಿ ಬಾಗಿ ಬಳುಕಿ ಮಹರ್ಷಿಗಳಿಗೆ ಸ್ವಾಗತವನ್ನು ಕೋರುತ್ತಿವೆ. ಅಲ್ಲಲ್ಲಿ ನಿಂತಿರುವ ಸುಂದರ ಹುಲ್ಲೆಗಳು ಮೇಯುವುದನ್ನು ನಿಲ್ಲಿಸಿ ಕಿವಿಗಳನ್ನು ನಿಮಿರಿಸಿಕೊಂಡು ಮಹರ್ಷಿಗಳ ಸ್ಪರ್ಶ ಸುಖಕ್ಕಾಗಿ ಕಾತರಿಸುತ್ತಿವೆ.

ಅನತಿದೂರದ ಬೃಹತ್ತಾದ ವಟವೃಕ್ಷದ ಕೆಳಗೆ ಮಹರ್ಷಿಗಳು ಅಪೂರ್ವವಾದ ದೃಶ್ಯವೊಂದನ್ನು ಕಂಡರು. ಕ್ರೌಂಚ ಪಕ್ಷಿಗಳ ಗಂಡು ಹೆಣ್ಣು ಜೋಡಿಯೊಂದು ಪ್ರಕೃತಿಯ ಜೀವಜಾಲಕ್ಕೆ ಕೊಂಡಿಯೊಂದನ್ನು ಬೆಸೆಯುವ ತವಕದಿಂದ ಸುರತ ಕ್ರೀಡೆಯಲ್ಲಿ ನಿರತವಾಗಿದ್ದವು. ಒಂದು ಮತ್ತೊಂದನ್ನು ಅಟ್ಟಿಸಿಕೊಂಡು ಹಾರುವುದು; ಲಾಘವದಿಂದ ಗಂಡು ಹೆಣ್ಣನ್ನು ನೆಲಕ್ಕೆ ಬೀಳಿಸಿ ಅದರ ಮೇಲೇರಿ ಕುಳಿತು ವಿಜೃಂಭಿಸಿ ರೆಕ್ಕೆಗಳನ್ನು ಪಟಪಟನೆ ಬಡಿದು ಸಂಭ್ರಮಿಸುವುದು; ಕೊರಳಿಗೆ ಕೊರಳನ್ನು ಬಳಸಿ ಚುಂಚದ ಒಳಗೆ ಚುಂಚವನ್ನು ಸೇರಿಸಿ ಒಂದು ಇನ್ನೊಂದನ್ನು ರಮಿಸುವುದು; ಒಟ್ಟಿನಲ್ಲಿ ತನಗೆ ಸಹಕರಿಸಿದ ಕ್ರಿಯೆಗೆ ಪ್ರತಿಫಲವಾಗಿ ನೀಡುವ ಮಧುರ ಸುಖದ ಮಧುರ ಸಂವೇದನೆಯಲ್ಲಿ ಜಗತ್ತನ್ನೇ ಮರೆತು ಸಂಭ್ರಮಿಸುತ್ತಿದ್ದವು.

(10ನೇ ಪುಟಕ್ಕೆ ...)

# ಅನುಭವ.....

**- ಡಾ। ವೈ, ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಉಡುಪಿ**

....ಒಂದು ಆಕ್ಷ್ಯನ್‌ಗೆ ಸ್ವಾಭಾವಿಕವಾಗಿ ಒದಗಲೇ ಬೇಕಾದ ರಿಯಾಕ್ಷ್ಯನ್ ಎಂದು ಗುರುತಿಸಿದಂತೆ ಮಾತ್ರ ಆಗುತ್ತದೆ.

ಈ ರಿಯಾಕ್ಯನನ್ನು ಅರ್ಥೈಸುವುದು ಯಾರು? ಬರಹದೊಳಗಿನ ಅರ್ಥವನ್ನು ತಿಳಿಯದಿದ್ದರೆ ಬರಹಗಳು ಕೇವಲ ಗೆರೆಗಳಾಗುತ್ತವೆ. ಈ ಗೆರೆಗಳಂತೆ ಕಾಣುವ ಬರಹಗಳನ್ನು ನಾವು ಅಭ್ಯಾಸ ಬಲದಿಂದಲೋ, ತಿಳಿಯಲೇ ಬೇಕಾದ ಕಾರಣದಿಂದಲೋ, ಹಿಂದಿನ ಅನುಭವ, ನೆನಪುಗಳನ್ನು ಕಲೆ ಹಾಕುವ ಮೂಲಕವೋ'' ಎಸೋಸಿಯೇಷನ್'' ಮೂಲಕವೋ ಅರ್ಥೈಸುತ್ತೇವೆ ಎನ್ನುವುದು ಎಸೋಸಿಯೇಷನ್ನಿನ ವಾದ. ಅರ್ಥ ಅಥವಾ ಅರಿವೆನ್ನುವುದೇ ಒಂದು ಸಂಘಾತ ಅಥವಾ ಪರಿಣಾಮವಲ್ಲದೆ ಬೇರೆ ಏನೂ ಅಲ್ಲ ಎನ್ನುವುದು ಈ ವಾದದ ತಿರುಳು. ಅಂದರೆ ವೃತ್ತಿಗಳು ಸತತವಾಗಿ ಕಾರ್ಯ ಕಾರಣ ಎರಡೂ ತನ್ನಷ್ಟಕ್ಕೇ ಆಗುತ್ತಿರುವ ಒಂದು ಕ್ರಿಯೆ ಎಂದಾಯಿತು. ಈ ಕ್ರಿಯೆಯಲ್ಲಿ ಅರಿವು ಎನ್ನುವುದಕ್ಕೆ ಸ್ಥಾನವೇ ಇಲ್ಲ. ವೃತ್ತಿಯನ್ನು ಅರಿಯುವುದೆಂಬುದೂ ಇಲ್ಲ; ಅರಿತು ಕಾರ್ಯ ಎಂಬ ಪರಿಣಾಮವೂ ಇಲ್ಲ. ಅದು ನಿರಂತರ ಒಂದು ಅನಿವಾರ್ಯ ಕ್ರಿಯೆ ಎಂದು ಅರ್ಥ. ಈ ವಾದದಲ್ಲಿ ವಿದ್ಯಾರ್ಥಿಯ ಜ್ಞಾನ ಮತ್ತು ಅವನು ಪರೀಕ್ಷೆಗೆ ಬರೆಯುವ ಉತ್ತರಗಳ ಮಧ್ಯೆ ವಿದ್ಯಾರ್ಥಿಗೆ ಸ್ಥಾನವೇ ಇಲ್ಲ. ನಾವು ಯೋಚಿಸುವ ವಿಚಾರ ಮತ್ತು ಪ್ರತಿಕ್ರಿಯೆಗಳ ಮಧ್ಯೆ ''ನಮಗೆ'' ಸ್ಥಾನವೇ ಇಲ್ಲ. ನಾವೇ ಇಲ್ಲ ಎಂದು ವಾದಿಸುವ ಮಾರ್ಗವಿದು. ನಾವೇ ಇಲ್ಲವಾದರೆ ಯೋಚಿಸುವವರು ಯಾರು? ಪರೀಕ್ಷೆಗೆ ಬರೆಯುವವರು ಯಾರು? ಆದುದರಿಂದ ಆತ್ಮ ಎಂದರೆ ಕೇವಲ ಎಸೋಸಿಯೇಷನ್ ಅಲ್ಲ. ಆ ಎಸೋಸಿಯೇಷನ್‌ನನ್ನು ಅರ್ಥೈಸುವ ಅರಿವು, ಎಸೋಸಿಯೇಷನ್‌ನನ್ನು ಅರ್ಥೈಸುವ ''ನಾನು'' ಎಂದರೆ ಆತ್ಮ. ಎಸೋಸಿಯೇಷನ್‌ಗೆ ಅತಿರಿಕ್ತವಾಗಿ ನಾನು ಇದ್ದೇನೆ.

ನಾನು ಎಂದರೆ ಒಂದು ಎಸೋಸಿಯೇಷನನ್ನು ಅರ್ಥ ಮಾಡುವವನು. ಅರ್ಥವೆಂದರೂ ನಾನೇ. ಆದರೂ ಕಾರ್ಯ ಕಾರಣ ಸಂಘಾತಕ್ಕೆ ಹೊರತಾಗಿ ಅದನ್ನು ತಿಳಿಯುವವನಾಗಿದ್ದೇನೆ. ಈ ಎಲ್ಲಾ ಸಂಶಯ ಪರಿಹಾರಕ್ಕಾಗಿಯೇ ಆತನನ್ನು ಅರಿವೆಂದೂ, ಅನುಭವವೆಂದೂ, ನಮ್ಮೊಳಗಿನ ಹೃದಯದಾಳದಲ್ಲಿ ಬೆಳಕಾಗಿ ಅನುಭವವಾಗುವ ಕೊನೆಯೆಂದೂ ವಿವರಿಸಲಾಗಿದೆ. ಅರಿವು, ಅನುಭವ, ಅರಿವಿನ ಬೆಳಕನ್ನು ಪ್ರತ್ಯೇಕಿಸಲಾಗುವುದಿಲ್ಲ. ಆದರೆ ಕಾರ್ಯ ಕಾರಣ ಸಂಘಾತವನ್ನಾಗಲಿ, ಎಸೋಸಿಯೇಷನ್ ಎಂದು ವಿವರಿಸುವ ಒಂದು ಪ್ರತಿಕ್ರಿಯೆಯನ್ನಾಗಲೀ ಅರಿಯುವ, ಅರಿವಿನಿಂದ ಪ್ರತ್ಯೇಕಿಸಿ ತಿಳಿಯಬಹುದು. ಹೀಗೆ ತಿಳಿಯುವ ಅರಿವೇ ಆತ್ಮ. ಇದನ್ನು ಅರಿಯುವ ಇನ್ನೊಂದಿಲ್ಲ.

ಯಾಂತ್ರಿಕ ಸ್ಥಿತಿಗೆ ಹೊರತಾಗಿ ಅದನ್ನು ಅರಿಯುವ ನಾನು ಇದ್ದೇನೆ. ಆತ್ಮನನ್ನು ತನ್ನಷ್ಟಕ್ಕೇ ತಾನು ಅನಿವಾರ್ಯವಾಗಿ ನಿರಂತರವಾಗಿ ಚಲಿಸುವ ಪರಿಣಾಮ ಎಂದು ಗುರುತಿಸುವುದು ಒಂದು ಯೋಚನೆಯನ್ನು ಇನ್ನೊಬ್ಬರಿಗೆ ಹೇಳುವಾಗ ಅವರ ಗುಣಕ್ಕೆ ಅನುಗುಣವಾಗಿ ಅದೇ ಸಮಕಾಲದಲ್ಲಿ ನಮಗೆ ಲಾಭವಾಗುವಂತಹ ತಿದ್ದುಪಡಿಮಾಡಿ ನಮ್ಮ ಅಹಂಕಾರ ಅಭಿಮಾನ ಹೆಚ್ಚಾಗುವಂತೆ ಮತು ಅದಕ್ಕೆ ಕುಂದು ಉಂಟಾಗುವಂತೆ ನಾವು ಪ್ರತಿಕ್ರಿಯಿಸುವುದು ಮತ್ತು ವ್ಯವಹರಿಸುವಂತೆ ನಮ್ಮಲ್ಲಿ ತೀರ್ಮಾನ ಉಂಟಾಗಿ ನಮ್ಮ ಕರ್ಮೇಂದ್ರಿಯಗಳಿಗೆ ನೆರವಾಗುವುದು ಈ ಎಲ್ಲವನ್ನೂ ಒಟ್ಟಿಗೆ ಒಂದು

(10ನೇ ಪುಟಕ್ಕೆ ...)

## ಹೊಸ ಬೆಳಕು

**ನಲ್ನುಡಿ :**

**ಶೃಣ್ವಂತು ಸರ್ವೇ ಅಮೃತಸ್ಯ ಪುತ್ರಾಃ**

ಮಾನವ ಎಂದರೆ ಸೃಷ್ಟಿಯ ವಿಕಾಸದ ಏಣಿಯಲ್ಲಿ ತುತ್ತತುದಿಯಲ್ಲಿರುವವನು, ಎಂದು ಉಪನಿಷತ್ತು ಬೋಧಿಸುತ್ತದೆ. ಆದ್ದರಿಂದಲೇ ಶ್ವೇತಾಶ್ವತರ ಉಪನಿಷತ್ತು ಆತನನ್ನು ಅಮೃತಪುತ್ರ ಎಂದು ಕರೆಯುತ್ತದೆ.

**ಪುಸ್ತಕ ಪರಿಚಯ :**

**ಚಿಂತನಮಾಲೆ-೨**

ಕೃಷ್ಣಕುಮಾರ್‌ರಾವ್ ಮಟ್ಟು

ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಮುಖವಾಣಿಯಾಗಿ ತಿಂಗಳಿಗೊಂದು ಸಂಚಿಕೆಯಂತೆ ಕಳೆದ 7 ವರ್ಷಗಳಿಂದ ನಿಯತವಾಗಿ ಶ್ರೀ ಶಾರದಾ ಪತ್ರಿಕೆಯು ಪ್ರಕಟಗೊಳ್ಳುತ್ತಿದೆ. ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿದ್ದು ಪತ್ರಿಕೆಗೆ ಪ್ರತಿತಿಂಗಳು ಶಾಶ್ವತವಾದ ಒಂದು ಅಂಕಣವಾಗಿ ಕೃಷ್ಣಕುಮಾರ್ ಮಟ್ಟು ಚಿಂತನ ಲೇಖನಗಳನ್ನು ಬರೆಯುತ್ತಿದ್ದಾರೆ. 2005ರ ಎಪ್ರಿಲ್‌ನಲ್ಲಿ ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವಸಂತ ಸಾಹಿತ್ಯೋತ್ಸವವನ್ನು ನೆರವೇರಿಸಿದ್ದು ಅದರ ಉದ್ಘಾಟನಾ ಸಮಾರಂಭದಲ್ಲಿ ಇವರ ಚೊಚ್ಚಲ ಪುಸ್ತಕ **ಚಿಂತನಮಾಲೆ - 1** ಬಿಡುಗಡೆಗೊಂಡಿತ್ತು, ಇದೀಗ **ಚಿಂತನಮಾಲೆ - 2,** 74ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಯಾಗಿದೆ. ಹಿನ್ನುಡಿಯಲ್ಲಿ ಉದ್ಯಾವರ ನಾಗೇಶ್‌ಕುಮಾರ್ (ರಂಗನಿರ್ದೇಶಕ) ಹೇಳಿದಂತೆ ಜಾಗತೀಕರಣದ ಹೊಸ್ತಿಲಲ್ಲಿರುವ ಇಂದಿನ ಕಾಲದಲ್ಲಿ ಎಲ್ಲರೂ ಐಟಿಬಿಟಿಯತ್ತ ಮುಖ ಮಾಡಿರುವ ಹೊತ್ತಿನಲ್ಲಿ ಶ್ರೀಯುತರು ಚಿಂತನಮಾಲೆಗಳಂತಹ ಬರಹಗಳನ್ನು ಪ್ರಕಟಿಸಿ ನಮ್ಮ ಸಾಂಸ್ಕೃತಿಕ ನೆಲೆಗಟ್ಟನ್ನು ಗಟ್ಟಿಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಅಂತೆಯೇ ಮುನ್ನುಡಿಯಲ್ಲಿ ಡಿ. ಮಂಜುನಾಥಯ್ಯ (ಕ್ಷೇತ್ರ ಶಿಕ್ಷಣಾಧಿಕಾರಿ, ಉಡುಪಿ ವಲಯ, ಉಡುಪಿ) ಅವರು ಹೇಳಿರುವುದು ''ಚಿಂತನಾರ್ಹ''. ವೃತ್ತಿಯಲ್ಲಿ ಶಿಕ್ಷಕರಾದ ಶ್ರೀ ಕೃಷ್ಣಕುಮಾರ್‌ರವರು ಪ್ರವೃತ್ತಿಯಲ್ಲಿ ಸಾಹಿತ್ಯಾರಾಧಾಕರಾಗಿರುವುದು ಗಮನಾರ್ಹವಾಗಿದೆ, 'ಕಲ್ಲೊಂದು ಪ್ರಕೃತಿ, ಕೆತ್ತಿದರೆ ಆಕೃತಿ, ಪೂಜಿಸಿದರೆ ಸರಸ್ವತಿ' ಈ ಕೃತಿಯಲ್ಲಿ 60 ಚಿಂತನ ಲೇಖನಗಳಿವೆ. ಕೇದಿಗೆ ವಸಂತರಾವ್ ಉಡುಪಿ ಅವರು ಪುಸ್ತಕಕ್ಕೆ ಆಕರ್ಷಕ ಮುಖಪುಟವನ್ನು ವಿನ್ಯಾಸಗೊಳಿಸಿದ್ದಾರೆ. ವೃತ್ತಿ-ನಿವೃತ್ತಿ ಲೇಖನದ ಕೇಂದ್ರ ಸಾಲುಗಳು ಹೀಗಿದೆ.

ಮಹಾಭಾರತದಲ್ಲಿ ಸುಯೋಧನ ಒಂದು ಕಡೆಯಲ್ಲಿ ಹೇಳುತ್ತಾನೆ.

ಜಾನಾಮಿ ಧರ್ಮಂ ನಚಮೇಪ್ರವೃತ್ತಿ:
ಜಾನಾಮ್ಯಧರ್ಮಂ ನಚಮೇ ನಿವೃತ್ತಿಃ

''ಧರ್ಮ ಯಾವುದೆಂದು ನನಗೆ ತಿಳಿದಿದೆ ಆದರೂ ಆಚರಿಸಲಾಗುತ್ತಿಲ್ಲ. ಅಧರ್ಮ ಯಾವುದೆಂದು ತಿಳಿದಿದೆ ಆದರೂ ಅದನ್ನು ಬಿಡಲಾಗುತ್ತಿಲ್ಲ''. ಇದು ಪ್ರಾರಂಭದಿಂದ ತನ್ನ ಅಂತ್ಯದವರೆಗೆ ಸುಯೋಧನ ತಾನು ಮಾಡಿದ ಕರ್ಮದ ಬಗ್ಗೆ ತನ್ನಲ್ಲಿದ್ದ ತುಡಿತವನ್ನು ಹೇಳುವ ಪರಿಯಾಗಿದೆ.

**- ವೈ. ಮೋಹನರಾವ್**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ